ಮಾದೇಗೌಡರು ಸ್ಟೇಟ್‌ಮೆಂಟ್ ಮಾಡಿದ ಮೇಲೆ, ಆತ್ಮಾನಂದರವರು ಸ್ಟೇಟ್‌ಮೆಂಟ್ ಮಾಡಿದ ಮೇಲೆ ಮುಖ್ಯ ಮಂತ್ರಿಗಳು ಮಂಡ್ಯ ಡಿಸ್ಟ್ರಿಕ್ಟ್‌ನಲ್ಲಿರುವ ಕಬ್ಬು ಎಷ್ಟು ಹಾನಿಯಾಗಿದೆ ಎಂದು ಅಸೆಸ್ ಮಾಡಲಿಕ್ಕೆ ರೆವಿನ್ಯೂ ಕಮಿಷನರ್ ಅಧ್ಯಕ್ಷತೆಯಲ್ಲಿ ಕಮಿಟಿ ರಚನೆ ಮಾಡಿದ್ದಾರೆ. ನಾನು ನಿಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ, ಕಾವೇರಿ ಬೇಸಿನ್ ಅಷ್ಟೇ ಅಲ್ಲ, ಕೃಷ್ಣ ಬೇಸಿನ್‌ನಲ್ಲಿ ಕೂಡ ಕಬ್ಬು ಒಣಗಿದೆ. ಮಹಾರಾಷ್ಟ್ರ ಸರ್ಕಾರದವರು ನೀರು ಬಿಡದೇ ಇರುವುದರಿಂದ ಇಡೀ ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಬರತಕ್ಕಂತಹ ಮೂರು – ನಾಲ್ಕು ಜಿಲ್ಲೆಗಳಲ್ಲಿರತಕ್ಕಂತಹ ಕಬ್ಬು ಕೂಡ ಒಣಗಿದೆ. ನಾನು ವಿನಂತಿ ಮಾಡುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಏನಾದರೂ ಆ ರೀತಿ ಆದೇಶ ಮಾಡಿದ್ದರೆ ಉತ್ತರ ಕರ್ನಾಟಕದಲ್ಲಿ ನೀರು ಇಲ್ಲದೆ ಎಷ್ಟು ಕಬ್ಬು ಒಣಗಿದೆ ಅದನ್ನು ಅಸೆಸ್ ಮಾಡಲಿಕ್ಕೆ ಇನ್ನು ಒಂದು ಕಮಿಟಿ ಮಾಡಿದರೆ ನಾವು ನಿಮಗೆ ಸ್ವಾಗತ ಮಡುತ್ತೇವೆ. ಅದು ಒಂದನೆಯದು. ಎರಡನೆಯದು ನನಗೆ ತಿಳಿದ ವರ್ತಮಾನದ ಪ್ರಕಾರ ಕಬ್ಬಿಗೆ ಅಣಿವಾರಿ ಡಿಕ್ಲೇರ್ ಮಾಡುವುದಕ್ಕೆ ಹೊರಟಿದ್ದಾರೆ. ಇದು ಆಗುತ್ತಾ ನೀವೇ ಹೇಳಿ. ಅಣಿವಾರಿ ಡಿಕ್ಲೇರ್ ಮಾಡಿದರೆ.....

ಶ್ರೀ ಎನ್ ಕರಿಯಣ್ಣ :– ಮಾನ್ಯ ಅಧ್ಯಕ್ಷರೆ, ಕೇಂದ್ರದವರು 600 ಕೋಟಿ ರೂಪಾಯಿಗಳನ್ನು ಅನೌನ್ಸ್ ಮಾಡಿದ್ದಾರೆ. ನಮ್ಮ ರಾಜ್ಯಕ್ಕೆ ಕೊಟ್ಟಿಲ್ಲ. ನಾವು ಕೊಡಬೇಕೆಂದು ಬೇಡಿಕೆ ಇಟ್ಟಿದ್ದೇವೆ. ನೀವು ರಾಜ್ಯದ ಚರ್ಚೆ ಮಾಡುತ್ತಿದ್ದೀರಿ. ನೀವು ಯಾವ ರೀತಿ ಚರ್ಚೆಗೆ ಅವಕಾಶ ಕೊಡುತ್ತೀರಿ?

ಶ್ರೀ ಶಿವಾನಂದ ಪಾಟೀಲ್ :– ಏನು ಅಧ್ಯಕ್ಷರೇ, ನೀವೂ ಆ ರೀತಿ ಮಾತನಾಡಿದರೆ?

ಅಧ್ಯಕ್ಷರು :– ಕೇಂದ್ರ ಸರ್ಕಾರದ ಬಗ್ಗೆ ಮಾತನಾಡಬೇಡಿ. ಈ ವಿಚಾರವನ್ನು ಇಲ್ಲಿಗೇ ಮುಕ್ತಾಯ ಮಾಡುತ್ತೇನೆ. ನೀವು ಬೇಗ ಮುಗಿಸದೆ ಇದ್ದರೆ ಈ ವಿಷಯವನ್ನು ಇಲ್ಲಿಗೇ ಮುಕ್ತಾಯ ಮಾಡುತ್ತೇನೆ.

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ :– ಮಾನ್ಯ ಅಧ್ಯಕ್ಷರೆ, ರಿವ್ಯೂ ಮಾಡಿ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು :– ಸಂಸದೀಯ ವ್ಯವಹಾರ ಸಚಿವರು ಹೇಳಿದ ಹಾಗೆ ಇದು ಬಹಳ ಮುಖ್ಯವಾದ ವಿಷಯ ಇದು ಒಂದು ದಿವಸ ಚರ್ಚೆಗೆ ಕೊಡಿ ಎಂದು ಹೇಳುತ್ತಿದ್ದಾರೆ. I will take the sense of the House whether we will discuss here on some other day.

ಶ್ರೀ ಜಗದೀಶ್ ಶೆಟ್ಟರ್ :– ಚರ್ಚೆ ಪ್ರಾರಂಭವಾಗಿದೆ ಇವತ್ತೇ ಚರ್ಚೆಯಾಗಲಿ.

ಅಧ್ಯಕ್ಷರು :– ಇದು ಬಹಳ ಮುಖ್ಯವಾದ ವಿಷಯ. ನಮ್ಮ ಮುಂದೆ ಸಮಯ ಇಲ್ಲ. ರೂಲ್ 69ರ ಪ್ರಕಾರ ಕಳುಹಿಸಿ ಇನ್ನೊಂದು ದಿವಸ ತೆಗೆದುಕೊಳ್ಳೋಣ. ಇದನ್ನು ಇಲ್ಲಿಗೇ ಮುಕ್ತಾಯ ಮಾಡೋಣ. ಮುಖ್ಯ ಮಂತ್ರಿಗಳ ಬಗ್ಗೆ ಹೇಳಿದರು ಅದರ ಬಗ್ಗೆ ಉತ್ತರ ಕೊಡಿ.

ಅಧ್ಯಕ್ಷರು :– ಶ್ರೀ ಕೆ.ಎಂ. ಕೃಷ್ಣಮೂರ್ತಿಯವರು

(2) ವಿಷಯ :– ದಿ.2.6.2003 ರಂದು ತರೀಕೆರೆ ಕೃಷಿ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :– ಸನ್ಮಾನ್ಯ ಅಧ್ಯಕ್ಷರೆ, ಒಂದು ಮಹತ್ತರವಾದ ವಿಷಯವನ್ನು ಈ ಸಂದರ್ಭದಲ್ಲಿ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಅಭಿನಂದಿಸಿ,

2.6.03ನೇ ಸೋಮವಾರ ಸಾಯಂಕಾಲ ಆರು ಗಂಟೆಯಲ್ಲಿ ತರೀಕೆರೆ ಕೃಷಿ ಅಧಿಕಾರಿ ಲೋಕೇಶ್ ಎನ್ನುವವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಆ ಆತ್ಮಹತ್ಯೆ ಯಾವುದಕ್ಕೋಸ್ಕರ ಮಾಡಿಕೊಂಡರು ಎನ್ನುವುದಕ್ಕೆ ಜಲಾನಯನ ಹಾಗೂ ಕೃಷಿ ನಿರ್ದೇಶಕರು ಉತ್ತರ ಕೊಟ್ಟಿದ್ದಾರೆ. ಆ ಉತ್ತರ ನಿಜವಾಗಿಯೂ ಸಮಂಜಸ ಅಲ್ಲವೆಂದು ಹೇಳಿದರೆ ತಪ್ಪಾಗಲಿಕ್ಕೆ ಇಲ್ಲ.

5.00

ಇವತ್ತು ಆ ಕೃಷಿ ಅಧಿಕಾರಿ ನೇಣು ಹಾಕಿಕೊಂಡು ಮೃತಪಟ್ಟು ಅವನ ಹೆಂಡತಿ ಮಕ್ಕಳನ್ನು ನಿರ್ಗತಿಕರನ್ನಾಗಿ ಮಾಡಿ ಬೀದಿಗೆ ಬಿಟ್ಟು ಹೋಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ ಯಾರು ಕಾರಣಕರ್ತರು ಎಂದು ಹೇಳಿದರೆ, ಅದರಲ್ಲಿ ಒಂದು ಡೆತ್ ನೋಟ್‌ನ್ನು ಶ್ರೀಮಾನ್ ಲೋಕೇಶ್‌ರವರು ಬರೆದಿಟ್ಟಿದ್ದಾರೆ. ಅದನ್ನು ನಿಮಗೆ ಕಳುಹಿಸಿಕೊಡುತ್ತಿದ್ದೇನೆ. ಆ ಡೆತ್ ನೋಟ್‌ನಲ್ಲಿ ಏನು ಬರೆದಿದ್ದಾರೆಂದರೆ ನನ್ನ ಸಾವಿಗೆ ಕೃಷಿ ಸಹಾಯಕ ನಿರ್ದೇಶಕರಾದ ಈಶ್ವರಪ್ಪ ಮತ್ತು ಶಾಸಕರು ಕಾರಣ ಎನ್ನುವ ಒಂದು ವಿಷಯವನ್ನು ಬರೆದಿಟ್ಟಿದ್ದಾರೆ. ನಾನು ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಅದೇನೆಂದರೆ ಈ ಕಾಂಗ್ರೆಸ್ ಸರ್ಕಾರದಲ್ಲಿ ಬರೀ ರೈತರೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು.

ಶ್ರೀ ಕಾಗೋಡು ತಿಮ್ಮಪ್ಪ :– ಮಾನ್ಯ ಅಧ್ಯಕ್ಷರೆ, ಈಗ ಅವರು ಹೇಳುತ್ತಿರುವ ಧಾಟಿಯನ್ನು ನೋಡಿದರೆ ಶಾಸಕರನ್ನು ಇಂಪ್ಲಿಕೇಟ್ ಮಾಡುವಂಥ ರೀತಿ ಇದೆ. ಶಾಸಕರೇ ಆಗಲಿ ಒಟ್ಟಾರೆ ಈ ಸದನದ ಯಾರೇ ಸದಸ್ಯರ ಮೇಲೆ ಆರೋಪ ಮಾಡಬೇಕಾದರೆ ಪೂರ್ವಭಾವಿಯಾಗಿ ಸಂಬಂಧಪಟ್ಟ ಶಾಸಕರಿಗೆ ನೋಟಿಸ್‌ನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು :– ಸಂಬಂಧಪಟ್ಟ ಶಾಸಕರಿಗೆ ನೋಟಿಸ್ ಕೊಟ್ಟಿದ್ದೀರಾ ಕೃಷ್ಣಮೂರ್ತಿಯವರೆ?

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ಇಲ್ಲ.

ಅಧ್ಯಕ್ಷರು :– ಹಾಗಾದರೆ ಪ್ರಸ್ತಾಪಕ್ಕೆ ಅವಕಾಶವಿಲ್ಲ. ಏಕೆಂದರೆ ನೀವು ಯಾರ ಮೇಲೆ ಇಂಪ್ಲಿಕೇಟ್ ಮಾಡುತ್ತಿದ್ದೀರೋ ಅವರಿಗೆ ಮೊದಲೇ ನಿಯಮ ಪ್ರಕಾರ ನೋಟಿಸ್ ಕೂಡ ಬೇಕಾಗುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ನಾನು ಶಾಸಕರ ಹೆಸರನ್ನು ಹೇಳುವುದಿಲ್ಲ. ನಾನು ಈಗಾಗಲೇ ಶಾಸಕರ ಹೆಸರನ್ನು ಹೇಳಿಯೂ ಇಲ್ಲ. ನನ್ನ ಹತ್ತಿರ ಒಂದು ನೋಟ್ ಇದೆ. ಅದನ್ನು ತಮಗೆ ಕಳುಹಿಸುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :– ಕೃಷ್ಣಮೂರ್ತಿಯವರೆ, ಸತ್ತವರು ಸಾಯುವುದಕ್ಕಿಂತ ಮುಂಚೆ ಆ ಡೆತ್ ನೋಟ್‌ನ್ನು ನಿಮಗೆ ಕೊಟ್ಟು ಹೋಗಿದ್ದರೆ?

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ಕಾಗೋಡು ತಿಮ್ಮಪ್ಪನವರೆ, ಪೋಲೀಸ್‌ನವರು ಮೊಹಜರ್ ಮಾಡಿದ್ದಾರೆ. ನಾನಲ್ಲ. ಪೊಲೀಸಿನವರು ಡೆತ್‌ನೋಟನ್ನು ವಶಪಡಿಸಿಕೊಂಡಿದ್ದಾರೆ. ನಾನು ಶಾಸಕರ ಹೆಸರನ್ನು ಹೇಳುತ್ತಿಲ್ಲ. ಚಿಕ್ಕಮಗಳೂರು ಜಿಲ್ಲೆಯ ಯಾವುದೇ ಶಾಸಕರು ಇರಬಹುದು. XX

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ :– ಅಧ್ಯಕ್ಷರೆ, ನನ್ನ ಹೆಸರು ಏಕೆ ಬಂತು? ನಾನು ಆ ಕೆಲಸವನ್ನು ಮಾಡಿದ್ದೇನೆಯೇ? ನಾನು ಇದನ್ನು ಕೇಳಬೇಕಾಗುತ್ತದೆ.

ಗೊಂದಲ

(XX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.)

ಅಧ್ಯಕ್ಷರು :– ಕೃಷ್ಣಮೂರ್ತಿಯವರೆ, ನೀವು ಮಾತನಾಡುವುದು ಇಂಡೈರಕ್ಟಾಗಿ ಶಾಸಕರ ಮೇಲೆ ಹೇಳುವಂತಿದೆ. ಆದ್ದರಿಂದ ಅಂಥದ್ದು ಏನಾದರೂ ಇದ್ದರೆ ಮೊದಲು ನೀವು ಶಾಸಕರಿಗೆ ಒಂದು ನೋಟಿಸ್ ಕೊಟ್ಟು ಆಮೇಲೆ ನನಗೂ ಆ ಬಗ್ಗೆ ತಿಳಿಸಿ. ಏಕೆಂದರೆ ನಮ್ಮ ನಿಯಮ ಪ್ರಕಾರ ಶಾಸಕರಿಗೂ ಒಂದು ನೋಟೀಸ್ ಕೊಡಬೇಕಾಗುತ್ತದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ :– ಮಾನ್ಯ ಅಧ್ಯಕ್ಷರೆ, ಆದರೆ ನನಗೂ ಮತ್ತು ಆ ಕೇಸ್‌ಗೂ ಸಂಬಂಧವೇ ಇಲ್ಲ. ನನ್ನ ಹೆಸರನ್ನು ಕಡತದಿಂದ ಹಿಂತೆಗೆಸಿ. ದಯಮಾಡಿ ನೀವು ನಮ್ಮ ರಕ್ಷಣೆಗೆ ಬರಬೇಕು.

ಶ್ರೀ ಶಿವಾನಂದ ಎಸ್ ಪಾಟೀಲ್ :– ಏಕೆಂದರೆ ಕೃಷ್ಣಮೂರ್ತಿಯವರು ಸಿಟ್ಟಿಂಗ್ ಮೆಂಬರ್ ಮೇಲೆ ಅಲಿಗೇಶನ್ ಮಾಡುತ್ತಿದ್ದಾರೆ. ಇದು ತಪ್ಪಾಗುತ್ತದೆ. ಅವರಿಗೆ ಒಂದು ನೋಟಿಸ್ ಕೊಡಿ. It is a very bad precedent.... ಅದು ಯಾರೇ ಇರಲಿ. ಅಧ್ಯಕ್ಷರೆ, ನೀವು ಇದನ್ನು ಅಲೊ ಮಾಡಬೇಡಿ.

ಅಧ್ಯಕ್ಷರು :– ಕೃಷ್ಣಮೂರ್ತಿಯವರೆ, ನೀವು ಶಾಸಕರ ಬಗ್ಗೆ ಕೇಳುತ್ತೀರಿ ಎಂಬುದು ನನಗೆ ಗೊತ್ತಿರಲಿಲ್ಲ. ಶೂನ್ಯ ವೇಳೆಯಲ್ಲಿ ಇದಕ್ಕೆ ನಾನು ಅಲೋ ಮಾಡಿದಾಗ ಶಾಸಕರ ಬಗ್ಗೆ ನೀವು ಹೇಳುತ್ತೀರಿ ಎಂಬುದು ನನಗೆ ಗೊತ್ತಾಗಲಿಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ನಾನು ಯಾರ ಮೇಲೂ ಛಾರ್ಜ್ ಮಾಡುತ್ತಿಲ್ಲ. ಬೇಕಾದರೆ ಅವರು ಏನು ತಮ್ಮ ಹೆಸರನ್ನು ಕಡತದಿಂದ ತೆಗೆಸಿ ಹಾಕಿ ಎಂದು ಕೇಳುತ್ತಿದ್ದಾರೆ ಆ ಪ್ರಕಾರ ನೀವು ಕಡತದಿಂದ ಅವರ ಹೆಸರನ್ನು ತೆಗೆಸಿ ಹಾಕಿ. ನಾನು ಶಾಸಕರು ಎಂದು ಹೇಳುತ್ತಿದ್ದೇನೆಯೇ ಹೊರತು ಹೆಸರು ಹೇಳುತ್ತಿಲ್ಲ. ನಿಮಗೆ ಬೇಕಾದರೆ ಆ ಡೆತ್ ನೋಟ್‌ನ್ನು ಕಳುಹಿಸಿಕೊಡುತ್ತೇನೆ. ಆ ಶಾಸಕರ ಹೆಸರನ್ನು ನಾನು ಹೇಳುತ್ತಿಲ್ಲ.

ಅಧ್ಯಕ್ಷರು :– ಬೇಡಿ ಬೇಡಿ, ನೀವು ಆ ರೀತಿ ಮಾತನಾಡಿದರೂ ಅದು ಇಂಡೈರಕ್ಟಾಗಿ ಶಾಸಕರ ಬಗ್ಗೆ ಬಂದೇ ಬರುತ್ತದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ :– ಮಾನ್ಯ ಅಧ್ಯಕ್ಷರೆ, ಮೊದಲು ನೀವು ನಮ್ಮ ರಕ್ಷಣೆಗೆ ಬನ್ನಿ.

ಅಧ್ಯಕ್ಷರು :– ಸಿಟ್ಟಿಂಗ್ ಮೆಂಬರ್ಸ್‌ಗಳ ಎಲ್ಲಾ ಹೆಸರುಗಳನ್ನು ತೆಗೆದುಹಾಕಲಾಗಿದೆ.

ಶ್ರೀ ಕರಿಯಣ್ಣ :– ಮಾನ್ಯ ಅಧ್ಯಕ್ಷರೆ, ಕೃಷ್ಣಮೂರ್ತಿಯವರು ಮಾತನಾಡುವಾಗ ನಾಲ್ಕು ಜನರ ಹೆಸರನ್ನು ಹೇಳಿದ್ದಾರೆಯಾದ ಕಾರಣ ಆ ನಾಲ್ಕು ಜನರ ಹೆಸರನ್ನೂ ಕಡತದಿಂದ ತೆಗೆಸಿ.

ಅಧ್ಯಕ್ಷರು :– ಆಯಿತು. ವರದಿಗಾರರೆ, ಆ ನಾಲ್ಕೂ ಜನರ ಹೆಸರನ್ನು ತೆಗೆಸಿದ್ದೇನೆ.

ಶ್ರೀ ಕರಿಯಣ್ಣ :– ಮಾನ್ಯ ಅಧ್ಯಕ್ಷರೆ, ಕೃಷ್ಣಮುರ್ತಿಯವರು ಮಾತನಾಡುವಾಗ ಶಾಸಕರುಗಳು ಎಂದು ಹೇಳುತ್ತಾರೆ. ಅವರು ಆಪಾದನೆ ಮಾಡಬೇಕಾದರೆ ದಯಮಾಡಿ ಸ್ಪಷ್ಟವಾಗಿ ಇಂಥ ಶಾಸಕರು ಎಂದು ಆಪಾದನೆ ಮಾಡಬೇಕಾಗುತ್ತದೆ. ಯಾರೋ ಶಾಸಕರು ಎಂದು ದಯಮಾಡಿ ಹೇಳಬಾರದು. ಅದಕ್ಕೆ ನೋಟಿಸ್ ಕೊಡಬೇಕು. ತದನಂತರ ತಾವು ಹೇಳಿದ ನಂತರದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿರುವುದು ಎಂದು ತಾವು ಅವರಿಗೆ ಹೇಳಬೇಕು.

ಅಧ್ಯಕ್ಷರು :– ಕೃಷ್ಣಮೂರ್ತಿಯವರೆ, ನೋಡಿ ನೀವು ಶಾಸಕರ ಹೆಸರು ಎತ್ತಿದರೆ ನೀವು ಮೊದಲೇ ಆ ಶಾಸಕರಿಗೆ ನೋಟಿಸ್‌ನ್ನು ನಿಯಮ ಪ್ರಕಾರ ಕೊಡಬೇಕಾಗುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ಮಾನ್ಯ ಅಧ್ಯಕ್ಷರೆ, ನಾನು ಶಾಸಕರ ಹೆಸರನ್ನು ಹೇಳುತ್ತಿಲ್ಲ. ಇರಬಹುದೇನೋ ಎಂದು ಹೇಳಿದೆಯಷ್ಟೆ. ನಾನು ಶಾಸಕರ ಹೆಸರನ್ನು ಹೇಳುತ್ತಿಲ್ಲ. ದಯವಿಟ್ಟು ನನಗೆ ಹತ್ತು ನಿಮಿಷಗಳ ಕಾಲ ಮಾತನಾಡಲು ತಾವು ಅವಕಾಶ ಮಾಡಿಕೊಡಿ.

ಅಧ್ಯಕ್ಷರು :– ಸೋ, ನೋ, ನೋ ಇದು ಒಂದು ನಿಮಿಷದ ಪ್ರಶ್ನೆಯಲ್ಲ. ಟೆಕ್ನಿಕಾಲಿಟಿಸ್. It is not the question of one minuteಅರ್ಥವಾಯಿತೇ? ಸಿಟ್ಟಿಂಗ್ ಮೆಂಬರ್ಸ್ ಮೇಲೆ ನೀವು ಏನಾದರೂ ಹೆಳುವುದಿದ್ದರೆ ಮೊದಲೇ ನೋಟಿಸ್ ಕೊಡಿ. ದಯವಿಟ್ಟು ಮೊದಲೇ ನೋಟಿಸ್ ಕೊಡಿ ಇದರಲ್ಲಿ ಶಾಸಕರು ಏನಾದರೂ ಇನ್‌ವಾಲ್ವ್ ಆಗಿದ್ದಾರೆ ಎಂದು ಏನಾದರೂ ಹೇಳುವುದಿದ್ದರೆ, you have to give prior notice even in indirect way ಆದರೂ ನೋಟೀಸ್ ಕೊಡಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ಮಾನ್ಯ ಅಧ್ಯಕ್ಷರೆ, ಶಾಸಕರು ಯಾರೋ ಇರಬಹುದು. ಶಾಸಕರ ಹೆಸರನ್ನು ನಾನು ಹೇಳುತ್ತಿಲ್ಲ. ನೀವು ವರದಿಯನ್ನು ತರಿಸಿಕೊಳ್ಳಿ.

ಶ್ರೀ ಕಾಗೋಡು ತಿಮ್ಮಪ್ಪ :– ಹೆಸರು ಹೇಳಬೇಕಾದ್ದೇನು, ಶಾಸಕರು ಎಂದು ಹೇಳಿದರೆ ಸಾಲದೆ?

Mr. Speaker :- Once again I will examine. We will take it up tomorrow or day-after. I have to examine.

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಕರೆದಿರುವುದರಿಂದ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

(ಶ್ರೀ ಕೆ.ಎಂ. ಕೃಷ್ಣಮೂರ್ತಿಯವರು ಸದನದ ಬಾವಿಗೆ ಬಂದು ಧರಣಿನಿರತರಾದರು)

Mr. Speaker :- I have got powers to rexamine-- ಎಂದರೂ ಬರುತ್ತಿದ್ದೀರಿ. ಬನ್ನಿ, ಬನ್ನಿ, ಸದನದ ಬಾವಿಯಲ್ಲಿ ಕುಳಿತುಕೊಳ್ಳಿ. ಅದು ನಿಮಗೆ ಕಾಮನ್ ಆಗಿಬಿಟ್ಟಿದೆ. ಬನ್ನಿ.

I have got powers to reexamine

ಎನ್ನುವುದು ಅವರಿಗೆ ಗೊತ್ತಿಲ್ವೆ? ಸೋಮಶೇಖರ್‌ರವರೆ, ಅವರು ಬಾವಿಯಲ್ಲಿ ನಿಂತಿರಲಿ ಬಿಡಿ. ನೀವು ಮಾತನಾಡಿ.

Sri D.B. Chandre Gowda :- He is threatening ಎವರಿ ಟೈಮ್ ಸದಸ್ಯರು ತ್ರೆಟ್ ಮಾಡಿಕೊಂಡು ವೆಲ್ ಒಳಗೆ ಬರುವುದು ಇದೆಯಲ್ಲಾ ಇದು ಸರಿಯಲ್ಲ. There is a limit for all these things.

ಅಧ್ಯಕ್ಷರು :– ಕೃಷ್ಣಮೂರ್ತಿಯವರೆ, When I have said I have reexamine, it is your duty to listen and go back to your seat.

ಗೊಂದಲ

Mr. Speaker :- I have to reexamine the entire issue because MLAs' names are involved.

ಗೊಂದಲ

ಅಧ್ಯಕ್ಷರು :– ನೋಡಿ ನಾನು ನಿಮಗೆ ಏನು ಈಗಾಗಲೇ ಮಾತನಾಡಲು ಪರ್ಮಿಶನ್ ಕೊಟ್ಟಿದ್ದೆ. ಅದನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದೇನೆ. ವಾಪಸ್ಸು ತೆಗೆದುಕೊಂಡು ಆ ಬಗ್ಗೆ ನಾನು ರಿ–
–ಎಕ್ಸಾಮಿನ್ ಮಾಡಬೇಕಾಗಿದೆ.

ಅಧ್ಯಕ್ಷರು :– ಅದರ ಬಗ್ಗೆ ನಾಳೆ ನೋಡೋಣ. ರಿ– ಎಕ್ಸಾಮಿನ್ ಮಾಡಿದ ಮೇಲೆ ಆ ಬಗ್ಗೆ ಹೇಳುತ್ತೇನೆ. ಈಗ ದಯವಿಟ್ಟು ಬಾಬಿಯಿಂದ ತಮ್ಮ ಸ್ಥಾನದಲ್ಲಿ ಹೋಗಿ ಕುಳಿತುಕೊಳ್ಳಿ. ಸೋಮಶೇಖರ್‌ರವರೆ, ತಾವು ಮಾತನಾಡಿ.

(ಧರಣಿ ನಿರತರಾಗಿದ್ದ ಶ್ರೀ ಕೆ.ಎಂ. ಕೃಷ್ಣಮೂರ್ತಿಯವರು ಧರಣಿ ಹಿಂತೆಗೆದು ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಂಡರು)

2) ವಿಷಯ :– ರಾಜ್ಯದಲ್ಲಿ ಡೆಂಗ್ಯುಜ್ವರ ನಿಯಂತ್ರಣದ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳ ಬಗ್ಗೆ

+ ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :– ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಡೆಂಗ್ಯು ಜ್ವರದ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೂ ಕೂಡ ಬಂದಿದೆ. ಮೊನ್ನೆ ತಾನೇ ಮಂಡ್ಯ ನಗರದಲ್ಲಿ ಪ್ರವೀಣ್‌ಕುಮಾರ್ ಎನ್ನುವ ಪ್ರೌಢಶಾಲಾ ಶಿಕ್ಷಕನಿಗೆ ಡೆಂಗ್ಯು ಜ್ವರ ಬಂದು ತಕ್ಷಣ ಬೆಂಗಳೂರಿಗೆ ಕರೆದುಕೊಂಡು ಬಂದರೂ ಕೂಡ ಚಿಕಿತ್ಸೆ ಫಲಪ್ರದವಾಗದೇ ಮೂಗಿನಲ್ಲಿ ರಕ್ತ ಬಂದು ಪರೀಕ್ಷೆ ಮಾಡಿದವರು ಈತ ಇದೇ ಜ್ವರದಿಂದ ಸತ್ತಿದ್ದಾನೆ ಎಂದು ಹೇಳಿದ್ದಾರೆ. ಇನ್ನು ಆರೋಗ್ಯ ಸಚಿವರು ಹೇಳಿಕೆಯನ್ನು ಕೊಟ್ಟು ಇಡೀ ರಾಜ್ಯದಲ್ಲಿ ಡೆಂಗ್ಯು ಜ್ವರಕ್ಕೆ 192 ಜನರು ಬಲಿಯಾಗಿದ್ದಾರೆ ಎಂದು ಹೇಳಿದ್ದಾರೆ.ನನಗೆ ಅನ್ನಿಸುತ್ತಿದೆ, 192 ಅಲ್ಲ, ನಿಮ್ಮ ಗಮನಕ್ಕೆ ಮಾತ್ರ ಅಷ್ಟು ಸಂಖ್ಯೆ ಎಂದು ಬಂದಿರಬಹುದು. ಗಮನಕ್ಕೆ ಬಾರದೇ ಇರತಕ್ಕಂಥ ಸಾವಿರಾರು ಪ್ರಕರಣಗಳು ಈ ರಾಜ್ಯದಲ್ಲಿ ಇವೆ. ಚಾಮರಾಜನಗರ, ಹಾಗು ಮಾನ್ಯ ಅಧ್ಯಕ್ಷರೆ, ತಮ್ಮ ಜಿಲ್ಲೆಯಾದ ಕೋಲಾರದ ಮಾಲೂರು ಒಂದರಲ್ಲಿಯೇ 100 ಪ್ರಕರಣ ಎಂದು ಬಂದಿದೆ. ಈಗ ಇದರಲ್ಲಿ ಅರ್ಧ ಭಾಗ ಕೋಲಾರ ಜಿಲ್ಲೆಯೊಂದರಲ್ಲಿಯೇ ಇದೆ. ಇದಕ್ಕೆ ಕಾರಣ ಏನೆಂದರೆ ಕುಡಿಯುವ ನೀರಿನ ಕೆಳಗಡೆ ಲವಣಾಂಶ ಜಾಸ್ತಿಯಾಗಿ ಅದರಿಂದಾಗಿ ಈ ರೀತಿಯ ಜ್ವರ ಬಂದಿದೆ ಎಂದು ಹೇಳಲಾಗಿದೆ. ಇದೊಂದೇ ಕಡೆಯಲ್ಲದೇ ಹಾಸನದಲ್ಲೂ ಕೂಡ ಒಬ್ಬ ಸಮರ್ಥ್ ಎನ್ನುವ ಹುಡುಗನೊಬ್ಬ ಸತ್ತಿದ್ದಾನೆ. ಚಾಮರಾಜನಗರದಲ್ಲಿ ಈ ಡೆಂಗ್ಯು ಜ್ವರಕ್ಕೆ ಆರು ಜನರು ಬಲಿಯಾಗಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ. ಬೆಂಗಳೂರು ನಗರದಲ್ಲಂತೂ ಅನೇಕ ಸ್ಲಮ್‌ಗಳಲ್ಲಿ ಇದರ ಹಾವಳಿ ಜಾಸ್ತಿಯಾಗಿದೆ. ಕೆಲವು ಕಡೆ ಔಷಧಿಗಳು ಸರಿಯಾಗಿ ಸಪ್ಲೈ ಆಗುತ್ತಿಲ್ಲವೆಂದು ಪತ್ರಿಕೆಗಳಲ್ಲಿ ಬಂದಿದೆ. ಇದಲ್ಲದೆ ಸರಿಯಾಗಿ ಚಿಕಿತ್ಸೆ ಕೂಡ ಆಗುತ್ತಿಲ್ಲವೆನ್ನುವ ವರದಿ ಬಂದಿದೆ. ಇಷ್ಟೊಂದು ತೀವ್ರತರವಾಗಿರತಕ್ಕಂಥ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಯಾವ ಕ್ರಮಗಳಗನ್ನು ತೆಗೆದುಕೊಂಡಿದ್ದಾರೆ, ಎಷ್ಟು ಔಷಧಿಗಳನ್ನು ಪೂರೈಕೆ ಮಾಡಿದ್ದಾರೆ, ಇದಕ್ಕೆ ಏನು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಹೇಳಬೇಕು. ಏಕೆಂದರೆ ಜನರು ಬಹಳ ಗಾಭರಿಯಾಗಿದ್ದಾರೆ. ಮಂಡ್ಯದಲ್ಲಿರಬಹುದು, ಬೇರೆ ಭಾಗಗಳಲ್ಲಿರಬಹುದು. ಏಕೆಂದರೆ ಜ್ವರ ಬಂದ ತಕ್ಷಣ ಇದು ಯಾವ ಜ್ವರವೋ, ಏನೋ ಎಂದು ಜನರು ಬಹಳ ಗಾಬರಿಯಾಗಿದ್ದಾರೆ. ಆದುದರಿಂದ ಈ ಬಗ್ಗೆ ಸರ್ಕಾರ ಏನು ಕ್ರಮಗಳನ್ನು ತೆಗೆದುಕೊಂಡಿದೆ ಎಂಬ ಬಗ್ಗೆ ಆರೋಗ್ಯ ಸಚಿವರು ಸದನದಲ್ಲಿ ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಇದಕ್ಕೆ ನಾಳೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು :– ಆಯಿತು, ಈಗ ಮಾನ್ಯ ವೇಳೆಯ ಪ್ರಸ್ತಾಪಗಳು ಸಾಕು.

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪುರಸ್ಕರಿಸಿಲ್ಲವೆಂದು ಸೂಚಿಸುತ್ತದೆ.)